ನಾವು ಹೇಳುತ್ತಿದ್ದೇವೆ. ಇವತ್ತು ನೀವು ಏನು ಧೋರಣೆ ಇಟ್ಟುಕೊಂಡಿದ್ದೀರಿ ಅದನ್ನು ನಾವು ಪ್ರತಿಭಟನೆ ಮಾಡಿ ಧರಣಿ ಮಾಡುತ್ತಿದ್ದೇವೆ.

(ಮಾನ್ಯ ಚಂದ್ರೇಗೌಡರು ಮತ್ತು ಶ್ರೀ ಸಿಂಧ್ಯರವರು ಧರಣಿಯಲ್ಲಿ ಪಾಲ್ಗೊಂಡರು.)

ಅಧ್ಯಕ್ಷರು : ಪ್ರಶ್ನೋತ್ತರ ಕಾಲ ಮುಗಿಯಿತು. ಈಗ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು

(ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.)

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ 30-8-91 ರ ಅಜೆಂಡಾ ಪ್ರಕಾರ 19ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸಬೇಕಾಗಿರುವ 14 ಪ್ರಶ್ನೆಗಳ ಪೈಕಿ 2002 ಮತ್ತು 2003 ಪ್ರಶ್ನೆಗಳನ್ನು ಹೊರತುಪಡಿಸಿ, ಉಳಿದ 12 ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಮಾಜ ಕಲ್ಯಾಣ ಇಲಾಖೆಯ ಕಛೇರಿಗಳಿರುವ ತಾಲ್ಲೂಕುವಾರು ವಿವರದ ಬಗ್ಗೆ

1833 - ಶ್ರೀ ಹೆಚ್.ಎಮ್. ರೇವಣ್ಣ (ಮಾಗಡಿ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ರಾಜ್ಯದಲ್ಲಿನ ಎಷ್ಟು ತಾಲ್ಲೂಕುಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಛೇರಿಗಳಿವೆ? ತಾಲ್ಲೂಕುವಾರು ವಿವರ ನೀಡುವುದು?*

ಆ) *ಎಲ್ಲಾ ತಾಲ್ಲೂಕುಗಳಲ್ಲಿ ಸದರಿ ಇಲಾಖೆಯ ಕಛೇರಿಗಳನ್ನು ಪ್ರಾರಂಭಿಸದಿರುವುದು ನಿಜವೇ?*

ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) *ಈ ಮೇಲ್ಕಂಡ ಇಲಾಖೆಯನ್ನು ಯಾವ ಆಧಾರದ ಮೇರೆಗೆ ಪರಿಗಣಿಸಲಾಗುತ್ತಿದೆ.*

ಈ) *ಡಾ. ಅಂಬೇಡ್ಕರ್‌ರವರ ಶತಮಾನೋತ್ಸವದ ಅಂಗವಾಗಿ ರಾಜ್ಯದಲ್ಲಿ ಉಳಿದಿರುವ ಎಲ್ಲಾ ತಾಲ್ಲೂಕುಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯನ್ನು ಪಾರಂಭಿಸಲಾಗುವುದೇ?*

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) 35. (ಪಟ್ಟಿ ಲಗತ್ತಿಸಿದೆ)

ಆ) ಹೌದು.

ಇ) 10 ಇಲಾಖಾ ಸಂಸ್ಥೆಗಳು ಇದ್ದು ಮತ್ತು 50,000 ಕ್ಕೆ ಹೆಚ್ಚಿಗೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಜನಸಂಖ್ಯೆ ಇದ್ದ ತಾಲ್ಲೂಕುಗಳಲ್ಲಿ ನಿಗದಿಪಡಿಸಿದ ಸೂತ್ರದಂತೆ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಕಛೇರಿಗಳನ್ನು ಪ್ರಾರಂಭಿಸಲಾಗುವುದು.

ಈ) ಇದೆ.

ಉ) ಉದ್ಭವಿಸುವುದಿಲ್ಲ.

ತಾಲ್ಲೂಕು ಮಟ್ಟದ ಅಧಿಕಾರಿಗಳ ಹುದ್ದೆಗಳನ್ನು ಈ ಕೆಳಕಂಡ ತಾಲ್ಲೂಕುಗಳಲ್ಲಿ ಸೃಜಿಸಲಾಗಿದೆ.

1. ಬೆಂಗಳೂರು (ಉತ್ತರ)
2. ಬೆಂಗಳೂರು (ದಕ್ಷಿಣ)
3. ಅನೇಕಲ್ ಬೆಂಗಳೂರು ಜಿಲ್ಲೆ